ಸಾಕ್ಷಿಗೆ ಪ್ರಮಾಣ ವಚನವನ್ನು ದಿ:05-12-2025 ರಂದು ಬೊಧಿಸಲಾಯಿತು.

ಪಾಟೀ ಸವಾಲು: 5 ನ ೀ ಪ್ರತಿವಾದಿ ಪರ ಶ್ರೀ ಬಿ ಎಲ್ ಎನ್ ವಕೀಲರಿಂದ:

1. 4 ನೇ ಪ್ರತಿವಾದಿ ನನ್ನ ಚಿಕ್ಕಪ್ಪ ಎಂದರೆ ಸರಿ. 1 ನೇ ಪ್ರತಿವಾದಿಯ ಗಂಡ ವಿಶ್ವನಾಥ ಭಟ್ ನನ್ನ ದೊಡ್ಡಪ್ಪ ಎಂದರೆ ಸರಿ. 2 ಮತ್ತು 3 ನೇ ಪ್ರತಿವಾದಿಗಳು ಸದರಿ ವಿಶ್ವನಾಥ ಭಟ್ ರವರ ಮಕ್ಕಳು ಎಂದರೆ ಸರಿ. 1 ನೇ ಪ್ರತಿವಾದಿ ನನ್ನ ದೊಡ್ಡಪ್ಪ ನ ಹೆಂಡತಿ ಎಂದರೆ ಸರಿ. ವಾದಿ ನನ್ನ ತಂದೆ ಇರುತ್ತಾರೆ. ಗಂಗಾಧರ ಭಟ್ ನನ್ನ ಅಜ್ಜ ಎಂದರೆ ಸರಿ.

2. ನನ್ನ ಅಜ್ಜ ಗಂಗಾಧರ ಬಭಟ್ ರವರಿಗೆ ಮೂರು ಜನ ಮಕ್ಕಳು ಅವರುಗಳೆಂದರೆ ನನ್ನ ತಂದೆ ಸುಬ್ರಾಯ ಗಂಗಾಧರ ಭಟ್ , ವಿಶ್ವನಾಥ ಗಂಗಾಧರ ಭಟ್ ಮತ್ತು 4 ನೇ ಪ್ರತಿವಾದಿ ಅಶೋಕ ಗಂಗಾಧರ ಭಟ್ .

3. ಈ ದಾವೆಯನ್ನು ನನ್ನ ತಂದೆ ದಾಖಲಿಸಿರುತ್ತಾರೆ. ನನ್ನ ತಂದೆ ಈ ದಾವೆಯನ್ನು ಹಿರೆಕೈ ಗ್ರಾಮದ ಸರ್ವೆ ನಂ 7/2 ಕ್ಕೆ ಸಂಬಂದಿಸಿದಂತೆ ಸಲ್ಲಿಸಿರುತ್ತಾರೆ. ಸದರಿ ಆಸ್ತಿಯನ್ನು ನಾನು ನೋಡಿರುತ್ತೇನೆ. ದಾವಾಸ್ತಿಯ ಪೂರ್ವಕ್ಕೆ ಸರ್ವೆ ನಂ 7/1, ಪಶ್ಚಿಮಕ್ಕೆ ಸರ್ವೆ ನಂ 7/3, ಉತ್ತರಕ್ಕೆ ಅರಣ್ಯ ಪ್ರದೇಶ, ದಕ್ಷಿಣಕ್ಕೆ ಟ್ರಂಚ್ ಇರುತ್ತದೆ.

4. ಈ ದಾವೆಯನ್ನು ಸಲ್ಲಿಸಲು ನನ್ನ ತಂದೆ ವಕೀಲರಿಗೆ ಮಾಹಿತಿ ನೀಡಿರುತ್ತಾರೆ. ಈ ದಾವೆಯನ್ನು ವಾದಿ ವಾಂಟಣಿ ಕರಾರಿನ ದಾಖಲೆಯ ಆಧಾರದ ಮೇಲೆ ಈ ದಾವೆ ಸಲ್ಲಿಸಿರುತ್ತಾರೆ.

5. ನಾನು ಶಿಕ್ಷನಾಗಿದ್ದು ಸಿದ್ದಾಪುರ ತಾಲೂಕಿನ HPS ಅರೆಹಳ್ಳ ಶಾಲೆಯಲ್ಲಿ ಈಗ ಕಾರ್ಯನಿರ್ವಹಿಸುತ್ತಿದ್ದೆನೆ.

6. ನನ್ನ ತಂದೆ ವಾದಿ ಸಹಕಾರಿ ಸಂಘ ಮತ್ತು ಬ್ಯಾಂಕ್ ಗಳಲ್ಲಿ ಖಾತೆ ಹೊಂದಿರುತ್ತಾರೆ ಎಂದರೆ ಸರಿ. ನನ್ನ ತಂದೆ ಸಹಕಾರಿ ಸಂಘ ಮತ್ತು ಬ್ಯಾಂಕ್ ಗಳಲ್ಲಿ ಖಾತೆ ಗಳಲ್ಲಿ ವ್ಯವಹಾರವನ್ನು ತಾನೇ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ಸದರಿ ಬ್ಯಾಂಕ್ ವ್ಯವಹಾರವನ್ನು ನಾನೇ ನೋಡಿಕೊಳ್ಳುತ್ತಿದ್ದೆನೆ ಎಂದು ನುಡಿಯುತ್ತಾರೆ. ಸದರಿ ಸಹಕಾರಿ ಸಂಘ ಮತ್ತು ಬ್ಯಾಂಕ್ ಗಳಲ್ಲಿ ಖಾತೆಗಳಿಗೆ ಸಂಬಂದಿಸಿದಂತೆ ವ್ಯವಹಾರ ನಡೆಸಲು ನನ್ನ ತಂದೆ ಯಾವುದೇ ಜಿ ಪಿ ಎ ನೀಡಿಲ್ಲ.

7. ನನ್ನ ತಂದೆ ಸಹಕಾರಿ ಸಂಘ ಮತ್ತು ಬ್ಯಾಂಕ್ ಗಳಲ್ಲಿ ವ್ಯವಹಾರ ನಡೆಸುತ್ತಿರುವುದರಿಂದ ಈ ಪ್ರಕರಣದಲ್ಲಿ ಹಾಜರಾಗಿ ಸಾಕ್ಷ್ಯ ಹೇಳಲು ಯಾವುದೇ ತೊಂದರೆ ಇರುವುದಿಲ್ಲ ಎಂದರೆ ಸರಿಯಲ್ಲ.



8. ನನ್ನ ಅಜ್ಜ ಮತ್ತು ಅವರ ಗಂಡು ಮಕ್ಕಳ ನಡುವೆ ನಮ್ಮ ಕುಟುಂಬದಲ್ಲಿ 1988 ರಲ್ಲಿ ವಿಭಾಗ ಆಗಿರುತ್ತದೆ. 1988 ರಲ್ಲಿ ನನಗೆ ನಾಲ್ಕು ವರ್ಷ ವಯಸ್ಸಾಗಿತ್ತು. ಸದರಿ ವಿಭಾಗಕ್ಕೆ ಸಂಬಂದಿಸಿದಂತೆ ನನಗೆ ವಯಕ್ತಿಕವಾಗಿ ಏನೆನು ವ್ಯವಹಾರ ಆಗಿರುತ್ತದೆ ಎಂದು ಗೊತ್ತಿಲ್ಲ. ಸದರಿ ವಿಭಾಗದಲ್ಲಿ ನನ್ನ ತಂದೆ ವಾದಿಗೆ ಹಿರೆಕೈ ಗ್ರಾಮ ಸರ್ವೆ ನಂ

7/2 ರಲ್ಲಿ 1 ಎಕರೆ 3 ಗುಂಟೆ ಕ್ಷೇತ್ರ, ಸದರಿ ವಿಭಾಗದಲ್ಲಿ 1 ನೇ ಪ್ರತಿವಾದಿಯ ಗಂಡ ವಿಶ್ವನಾಥ ಗಂಗಾಧರ ಭಟ್ ರವರಿಗೆ ಹಿರೆಕೈ ಗ್ರಾಮ ಸರ್ವೆ ನಂ 7/2 ರಲ್ಲಿ 1 ಎಕರೆ 3 ಗುಂಟೆ ಕ್ಷೇತ್ರ, ಸದರಿ ವಿಭಾಗದಲ್ಲಿ 4 ನೇ ಪ್ರತಿವಾದಿಗೆ ಹಿರೆಕೈ ಗ್ರಾಮ ಸರ್ವೆ ನಂ 7/1 ರಲ್ಲಿ 1 ಎಕರೆ 3 ಗುಂಟೆ ಕ್ಷೇತ್ರ, ಬಂದಿರುತ್ತದೆ. ಸದರಿ ವಿಭಾಗದಲ್ಲಿ ನನ್ನ ಅಜ್ಜ ಗಂಗಾಧರ ಭಟ್ ರವರಿಗೆ ಹಿರೆಕೈ ಗ್ರಾಮ ಸರ್ವೆ ನಂ 7/1 ರಲ್ಲಿ 1 ಎಕರೆ 6 ಗುಂಟೆ ಕ್ಷೇತ್ರ, ಬಂದಿರುತ್ತದೆ. ಸದರಿ ವಿಭಾಗದಲ್ಲಿ ನನ್ನ ತಂದೆ ವಾದಿಗೆ ಮತ್ತು 1 ನೇ ಪ್ರತಿವಾದಿಯ ಗಂಡ ವಿಶ್ವನಾಥ ಭಟ್ ತಮ್ಮ ಭಾಗಕ್ಕೆ ಸಂಬಂದಿಸಿದಂತೆ ಕಬ್ಜಾ ವೈವಾಟನ್ನು ನೀಡಿರುತ್ತಾರೆ. ನನ್ನ ಅಜ್ಜ ಗಂಗಾಧರ ಭಟ ಮತ್ತು 4 ನೇ ಪ್ರತಿವಾದಿಯ ಭಾಗಕ್ಕೆ ಬಂದ ಕ್ಷೇತ್ರಗಳನ್ನು ಒಟ್ಟಿಗೆ ವೈವಾಟಿ ಮಾಡುತ್ತಿದ್ದರು.

9. ಸದರಿ ವಿಭಾಗದ ಪ್ರಕಾರ ತಮ್ಮ ತಮ್ಮ ಭಾಗಕ್ಕೆ ಬಂದ ಆಸ್ತಿಗಳನ್ನು ಪ್ರತ್ಯೇಕವಾಗಿ ಸ್ವಾಧೀನ ಹೊಂದಿ ವೈವಾಟಿ ಮಾಡಿಕೊಂಡು ಬರುತ್ತಿದ್ದರು ಎಂದರೆ ಸರಿ. ಸದರಿ ವಿಭಾಗದಲ್ಲಿ ನನ್ನ ತಂದೆ ವಾದಿಗೆ ಬಂದ ಆಸ್ತಿಯಲ್ಲಿ 4 ನೇ ಪ್ರತಿವಾದಿಗೆ , 1 ನೆ ಪ್ರತಿವಾದಿಯ ಗಂಡ ವಿಶ್ವನಾಥ ಭಟ್ ರವರಿಗೆ ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲ. 1 ನೇ ಪ್ರತಿವಾದಿ ಗಂಡ ವಿಶ್ವನಾಥ ಭಟ್ ರವರಿಗೆ ಸದರಿ ವಿಭಾಗದಲ್ಲಿ ಬಂದ ಆಸ್ತಿಗೆ ವಾದಿಯಾದ ನನ್ನ ತಂದೆಗೆ ಮತ್ತು 4 ನೇ ಪ್ರತಿವಾದಿಗೆ ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲ ಎಂದರೆ ಸರಿ. ನಮ್ಮ ಕುಟುಂಬದಲ್ಲಿ 1988 ರಲ್ಲಿ ಆದ ವಾಂಟಣಿ ಕರಾರಿನ ಪ್ರಕಾರ ತಮ್ಮ ತಮ್ಮ ಭಾಗಕ್ಕೆ ಬಂದ ಕ್ಷೇತ್ರಕ್ಕೆ ಅವರವರೇ ಹಕ್ಕು ಮತ್ತು ವೈವಾಟಿ ಹೊಂದಿರುತ್ತಾರೆ ಎಂದರೆ ಸರಿ.

10. ಹಿರೆಕೈ ಗ್ರಾಮ ಸರ್ವೆ ನಂ 7/2 ರಲ್ಲಿ ಒಟ್ಟು 3 ಎಕರೆ 12 ಗುಂಟೆ ಕ್ಷೇತ್ರ ಇರುತ್ತದೆ ಎಂದರೆ ಸರಿ. ಸದರಿ ವಿಭಾಗ ಆದ ನಂತರ ಮತ್ತು ಸದರಿ ಸರ್ವೆ ನಂಬರ ಪೊಡಿ ಆದ ನಂತರ 1 ನೇ ಪ್ರತಿವಾದಿ ಗಂಡ ವಿಶ್ವನಾಥ ಭಟ್ ರವರಿಗೆ ಹಿರೆಕೈ ಗ್ರಾಮ ಸರ್ವೆ ನಂ 7/2 ರಲ್ಲಿ 1 ಎಕರೆ 3 ಗುಂಟೆ ಕ್ಷೇತ್ರ ಬಂದಿರುತ್ತದೆ ಎಂದರೆ ಸರಿ. ಆ ಪ್ರಕಾರವಾಗಿ ಸದರಿ ಆಸ್ತಿಯ ಪಹಣಿಪತ್ರಿಕೆಯಲ್ಲಿ 1 ನೇ ಪ್ರತಿವಾದಿ ಗಂಡ ವಿಶ್ವನಾಥ ಭಟ್ ರವರ ಹೆಸರಿನಲ್ಲಿ ಬರುತ್ತಿವೆ ಎಂದರೆ ಸರಿ. 1 ನೇ ಪ್ರತಿವಾದಿ ಗಂಡ ವಿಶ್ವನಾಥ ಭಟ್ ರವರು ಈಗ ಬದುಕಿರುವುದಿಲ್ಲ. ಸದರಿ 1 ನೇ ಪ್ರತಿವಾದಿ ಗಂಡ ವಿಶ್ವನಾಥ ಭಟ್ ರವರು 1992 ರಲ್ಲಿ ಮೃತಪಟ್ಟಿರುತ್ತಾರೆ.



11. ಹಿರೆಕೈ ಗ್ರಾಮ ಸರ್ವೆ ನಂ 7/2 ರಲ್ಲಿ 1 ಎಕರೆ 3 ಗುಂಟೆ ಕ್ಷೇತ್ರವನ್ನು ತನ್ನ ಜೀವಿತಾವಧಿಯಲ್ಲಿ ಸದರಿ 1 ನೇ ಪ್ರತಿವಾದಿ ಗಂಡ ವಿಶ್ವನಾಥ ಭಟ್ ರವರು ಸ್ವಾಧಿನ ಹೊಂದಿ ವೈವಾಟಿ ಮಾಡಿಕೊಂಡು ಬರುತ್ತಿದ್ದರು ಎಂದರೆ ಸರಿ. ಸದರಿ 1 ನೇ ಪ್ರತಿವಾದಿ ಗಂಡ ವಿಶ್ವನಾಥ ಭಟ್ ರವರ ಮರಣಾನಂತರ ಹಿರೆಕೈ ಗ್ರಾಮ ಸರ್ವೆ ನಂ 7/2 ರಲ್ಲಿ 1 ಎಕರೆ 3 ಗುಂಟೆ ಕ್ಷೇತ್ರ 1 ರಿಂದ 3 ನೇ ಪ್ರತಿವಾದಿಗಳ ಹೆಸರಿನಲ್ಲಿ ದಾಖಲಾಗಿ 1 ರಿಂದ 3 ನೇ ಪ್ರತಿವಾದಿಗಳು ಸ್ವಾಧಿನ ಅನುಭವವನ್ನು ಹೊಂದಿರುತ್ತಾರೆ ಎಂದರೆ ಸರಿ. ಹಿರೆಕೈ ಗ್ರಾಮ ಸರ್ವೆ ನಂ 7/2 ರಲ್ಲಿ 1 ಎಕರೆ 3 ಗುಂಟೆ ಕ್ಷೇತ್ರವನ್ನು 1 ನೇ ಪ್ರತಿವಾದಿ ಬ್ಯಾಂಕ್ ನಲ್ಲಿ ಸಾಲ ಮಾಡಿ ಅಬಿವೃದ್ಧಿ ಪಡಿಸಿರುತ್ತಾರೆ ಎಂದರೆ ಸರಿ.

12. ಹಿರೆಕೈ ಗ್ರಾಮ ಸರ್ವೆ ನಂ 7/2 ರಲ್ಲಿ ವಾದಿಯಾದ ನನ್ನ ತಂದೆಗೆ ಯಾವುದೇ ಕ್ಷೇತ್ರ ವಿಭಾಗದಲ್ಲಿ ಬಂದಿರುವುದಿಲ್ಲ.

13. ಹಿರೆಕೈ ಗ್ರಾಮ ಸರ್ವೆ ನಂ 7/2 ರಲ್ಲಿ 1 ಎಕರೆ 3 ಗುಂಟೆ ಕ್ಷೇತ್ರವನ್ನು 1 ರಿಂದ 3 ನೇ ಪ್ರತಿವಾದಿಗೆ 5 ನೇ ಪ್ರತಿವಾದಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಹಿರೆಕೈ ಗ್ರಾಮ ಸರ್ವೆ ನಂ 7/2 ರಲ್ಲಿ 1 ಎಕರೆ 3 ಗುಂಟೆ ಕ್ಷೇತ್ರಕ್ಕೆ ಸಂಬಂಸಿದಂತೆ ಕ್ರಯದ ಬಾಬ್ತು ಸಂಪೂರ್ಣ ಹಣವನ್ನು 1 ರಿಂದ 3 ನೇ ಪ್ರತಿವಾದಿಗೆ 5 ನೇ ಪ್ರತಿವಾದಿ ಪಾವತಿ ಮಾಡಿರುತ್ತಾರೆ ಎಂದರೆ ಸರಿ.

14. ದಿಃ 17-02-2020 ರಂದು ದಾವಾಸ್ತಿಯ ಸ್ವಾಧೀನವನ್ನು 5 ನೇ ಪ್ರತಿವಾದಿಗೆ 1 ರಿಂದ 3 ನೇ ಪ್ರತಿವಾದಿ ಬಿಟ್ಟುಕೊಟ್ಟಿರುತ್ತಾರೆ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ.

15. ದಿಃ 17-02-2020 ರಿಂದ ದಾವಾಸ್ತಿಯ ಸ್ವಾಧೀನವನ್ನು 5 ನೇ ಪ್ರತಿವಾದಿ ಹೊಂದಿ ವೈವಾಟಿ ಮಾಡಿಕೊಂಡು ಬರುತ್ತಿದ್ದಾರೆ ಎಂದರೆ ಸರಿ. ದಾವಾಸ್ತಿಯಲ್ಲಿ 5 ನೇ ಪ್ರತಿವಾದಿ ಅಡಿಕೆ , ಭತ್ತವನ್ನು ಬೆಳೆಸುತ್ತಿದ್ದಾರೆ ಎಂದರೆ ಸರಿ.

16. ದಾವಾಸ್ತಿಯಲ್ಲಿ ನನಗಾಗಲಿ, ವಾದಿಯಾದ ನನ್ನ ತಂದೆಗಾಗಲಿ ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾಸ್ತಿಗೆ ಸಂಬಂದಿಸಿದಂತೆ 1 ನೇ ಪ್ರತಿವಾದಿಯ ಗಂಡ ವಿಶ್ವನಾಥ ಭಟ್ ರವರು ಸರ್ಕಾರಕ್ಕೆ ತೆರಿಗೆ ಪಾವತಿ ಮಾಡುತ್ತಿದ್ದರು. ಈಗ ಸದರಿ ಆಸ್ತಿಗೆ ಸಂಬಂದಿಸಿದಂತೆ ಯಾರು ತೆರಿಗೆ ಪಾವತಿ ಮಾಡುತ್ತಿದ್ದಾರೆ ಎಂದು ನನಗೆ ಗೊತ್ತಿಲ್ಲ.

ಈ ಹಂತದಲ್ಲಿ 5 ನೇ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀಸವಾಲಿಗೆ ಸಮಯವನ್ನು ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.



(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ. ಸರಿ ಇದೆ,**

**ಸಹಿ ಇದೆ**

**ಸಿವಿಲ್ ನ್ಯಾಯಾಧೀಶರು ಸಿದ್ದಾಪುರ**